ಗಳ ಬೆಲೆ ಜಾಸ್ತಿಯಾಗಿ ವಿದ್ಯಾರ್ಥಿಗಳಲ್ಲಿ ಮತ್ತು ತಂದೆ ತಾಯಿಗಳಲ್ಲಿ ಅಸಮಾಧಾನ ಪರಿಸ್ಥಿತಿ ಇದ್ದರೂ ಕೂಡ ಸರ್ಕಾರ ಈ ಬಗ್ಗೆ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ದಾಖಲು ಮಾಡಿಲ್ಲವೆಂಬುದು ತುಂಬಾ ವಿಷಾದನೀಯ ಇದರ ಬಗ್ಗೆ ಸರ್ಕಾರ ಉಚ್ಚ ನ್ಯಾಯಾಲಕ್ಕೆ ಏತಕ್ಕೆ ಅಪೀಲುಮಾಡಲಿಲ್ಲ, ಬಡ ವಿದ್ಯಾರ್ಥಿಗಳ ಬಗ್ಗೆ ಏತಕ್ಕೆ ಕಾಳಜಿ ವಹಿಸಲಿಲ್ಲ, ಸರ್ಕಾರ ಏತಕ್ಕೆ ಸುಮ್ಮನೆ ಕುಳಿತಿದೆ ಎಂಬ ಬಗ್ಗೆ ಸರ್ಕಾರದ ಗಮನ ಸೆಳೆಯಲಚ್ಚಿಸುತ್ತೇನೆ.

ಶ್ರೀ ಎ. ಲಕ್ಷ್ಮಿಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ನನ್ನ ಕಷ್ಟ ಏನು ಎಂದು ಹೇಳಬಹುದಲ್ಲ. ನಿನ್ನೆಯೆಲ್ಲ...

ಅಧ್ಯಕ್ಷರು.—ಸಂಬಂಧಪಟ್ಟ ಸಚಿವರ ಗಮನಕ್ಕೆ ತರುತ್ತೇನೆಂದು ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಷಯವನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತರುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ತಾವು ಒಂದು ಭರವಸೆ ಕೊಟ್ಟರೆ ಸಾಕು. ಕೋರ್ಟಿಗೆ ಅಪೀಲು ಹಾಕುತ್ತೇವೆ, ಸ್ಟೇ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೆ ಸಾಕು. ಏಕೆಂದರೆ ತಾವು ಕಾನೂನು ಮಂತ್ರಿಗಳಾಗಿದ್ದೀರಿ.

ಅಧ್ಯಕ್ಷರು.—ಆದರೂ ಅವರು ಸಂಸದೀಯ ವ್ಯವಹಾರಗಳ ಮಂತ್ರಿಗಳು.

(ii) ಬೆಂಗಳೂರಿನ ನಾಗರೀಕರಿಗೆ ಕಳಪೆ ಅಕ್ಕಿಯನ್ನು ನೀಡುತ್ತಿರುವ ಬಗ್ಗೆ

ಶ್ರೀ ಎ. ಕೃಷ್ಣಪ್ಪ.—ಆಹಾರ ಇಲಾಖೆಯವರು ಬೆಂಗಳೂರಿನ ನಾಗರೀಕರಿಗೆ ಈ ತಿಂಗಳು ನೀಡುತ್ತಿರುವ ಅಕ್ಕಿಯನ್ನು ದನಗಳಿಗೂ ಕೂಡ ಹಾಕಲಾಗದಷ್ಟು ಕಳಪೆಯಾಗಿದ್ದು ಅದನ್ನು ಮನುಷ್ಯರು ಬಳಸಿದಲ್ಲಿ ಆರೋಗ್ಯಕ್ಕೆ ಹಾನಿಯಾಗುವ ಸಂಭವವಿರುವುದರಿಂದ ಈ ಕೂಡಲೇ ಸದರಿ ಅಕ್ಕಿಯನ್ನು ಎಲ್ಲ ನ್ಯಾಯ ಬೆಲೆ ಅಂಗಡಿಗಳಿಂದ ವಾಪಸ್ಸು ಪಡೆಯಬೇಕಾಗಿದೆ ಹಾಗೂ ಒಳ್ಳೆಯ ಅಕ್ಕಿಯನ್ನು ನ್ಯಾಯಬೆಲೆ ಅಂಗಡಿಗಳಿಗೆ ಒದಗಿಸುವ ಮೂಲಕ ನಾಗರೀಕರಿಗೆ ದೊರಕುವಂತೆ ಮಾಡಬೇಕಾಗಿದೆ. ಮೇಲ್ಕಂಡ ಅಕ್ಕಿಯ ಬೆಲೆ ಇದುವರೆಗೆ ಸರಬರಾಜು ಮಾಡುತ್ತಿದ್ದ ಅಕ್ಕಿಯ ಬೆಲೆಯಷ್ಟೆ ಇದ್ದು ನಾಗರೀಕರಿಗೆ ದಿಕ್ಕು ತೋಚದಂತಾಗಿರುವುದರಿಂದ ಇದನ್ನು ಸರಬರಾಜು ಮಾಡಿದ ಅಧಿಕಾರಿಗಳ ಮೇಲೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದೂ ಸರ್ಕಾರವನ್ನು ಒತ್ತಾಯಿಸುತ್ತೇನೆ ಮಂತ್ರಿ ಅಕ್ಕಿಯನ್ನು ತಮ್ಮ ಪರಿಶೀಲನೆಗೆ ಕಳುಹಿಸಿಕೊಡುತ್ತಿದ್ದೇನೆ,

ಶ್ರೀ ಜಿ ಬಸವಣ್ಣಪ್ಪ (ಮಾನ್ಯ ಆಹಾರ ಮತ್ತು ನಾಗರೀಕ ಪೂರೈಕೆ ಮಂತ್ರಿಗಳು).—ಪ್ರಸಕ್ತ ಸರ್ಕಾರ ಬಳಕೆದಾರರಿಗೆ ಅತ್ಯುತ್ತಮ ಅಕ್ಕಿಯನ್ನು ಮತ್ತಿತರ ಆಹಾರ ವಸ್ತುಗಳನ್ನು ಕೊಡತಕ್ಕದ್ದರ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡಿದೆ. ಕಳೆದ ಎರಡು ತಿಂಗಳಿನಿಂದ ಪಂಚಾಬಿನಿಂದ ತಂದ ಅಕ್ಕಿಯನ್ನು ಅಲಾಟ್ ಮಾಡುತ್ತಿದ್ದಾರೆ. ನಿಜವಾಗಿ ಆ ಅಕ್ಕಿ ಚೆನ್ನಾಗಿಲ್ಲ. ಅದಕ್ಕೋಸ್ಕರ ಒಂದು ವಾರದ ಹಿಂದೆ ಕಾರ್ಯದರ್ಶಿಯವರನ್ನು ಮತ್ತು ನಿರ್ದೇಶಕರನ್ನು ಕಳುಹಿಸಿ ಪಂಜಾಬಿನಿಂದ ತರಿಸತಕ್ಕ ಅಕ್ಕಿಯನ್ನು ನಿಲ್ಲಿಸಿ ಆಂಧ್ರ ಪ್ರದೇಶದಿಂದ ತಂದ ಅಕ್ಕಿಯನ್ನು ಅಲಾಟ್ ಮಾಡಬೇಕೆಂದು ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳುವುದರಲ್ಲಿ ಸತ್ಯಾಂಶ ಇದೆ ಮತ್ತು ಅಕ್ಕಿ ಸರಬರಾಜಿನಲ್ಲಿ ಲೋಪದೋಷ ಇದೆ ಎಂಬುದನ್ನು ಒಪ್ಪಿಕೊಂಡಿದ್ದೇನೆ. ಅದನ್ನು ಸರಿಪಡಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಂಡಿದ್ದೇನೆ.

ಅಧ್ಯಕ್ಷರು.—ಇದರ ಮೇಲೆ ಮತ್ತೆ ಚರ್ಚೆಗೆ ಅವಕಾಶ ಇಲ್ಲ. ಮಂತ್ರಿಗಳ ಪಕ್ಕದಲ್ಲಿ ಬೇಕಾದರೆ ಕುಳಿತು ಕೇಳಬಹುದು.

ಶ್ರೀ ಎ. ಕೃಷ್ಣಪ್ಪ.—ಪಂಜಾಬ್ ರಾಜ್ಯದಿಂದ ಅಕ್ಕಿ ಬಂದಿದೆ ಎಂದು ಹೇಳಿದರು. ಎಲ್ಲಿಂದ ಬಂದಿದೆ ಎಂದು ಮೊಟೆ ಮೇಲೆ ಸೀಲು ಇರುವುದಿಲ್ಲ, ಈ ದೋಷದ ಬಗ್ಗೆ ನೇರವಾಗಿ ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ನಿಯಮಾವಳಿಯನ್ನು ಓದಿಕೊಳ್ಳಬೇಕು. ರೂಲ್ ೩೩ರ ಪ್ರಕಾರ ಮತ್ತೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಇಲ್ಲ, ಸಂಬಂಧ ಪಟ್ಟ ಮಂತ್ರಿಗಳು ಕ್ರಮ ಕೈಗೊಂಡಿದ್ದೇವೆಂದು ಹೇಳಿದ್ದಾರೆ. ಮತ್ತೇನಾದರೂ ಕೇಳಬೇಕಾಗಿದ್ದರೆ ಮಂತ್ರಿಗಳ ಪಕ್ಕದಲ್ಲಿ ಕುಳಿತುಕೊಂಡು ಕೇಳಿ. ಇಲ್ಲಿ ಮಾತ್ರ ಮತ್ತೆ ಮಾತನಾಡುವುದಕ್ಕೆ ಬರುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.